# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1570** |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19-12-2025 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬೆಳೆ ಸಮೀಕ್ಷೆ, ಬೆಳೆ ವಿಮೆ ಸಮೀಕ್ಷೆ, ಬೆಳೆ ನಷ್ಟ ಸಮೀಕ್ಷೆ, ಬೆಳೆ ಕಟಾವು ಪ್ರಯೋಗ (CCE) ಹಾಗೂ ಇತರ ಕೃಷಿ ಸಂಬಂಧಿತ ಮಾಹಿತಿ ದಾಖಲೀಕರಣ ಪ್ರಕ್ರಿಯೆಯನ್ನು ಯಾರು ಮಾಡುತ್ತಾರೆ; ಕೃಷಿ ಇಲಾಖೆಯೇ ಮಾಡುತ್ತದೆಯೇ ಅಥವಾ ಇತರ ಇಲಾಖೆಗಳ ಸಿಬ್ಬಂದಿ ಮಾಡುತ್ತಾರೆಯೇ; | ರಾಜ್ಯದಲ್ಲಿ ಪ್ರಸ್ತುತ ಬೆಳೆ ಸಮೀಕ್ಷೆಯನ್ನು ಸ್ವತಃ ರೈತರು ಹಾಗೂ ಖಾಸಗಿ ನಿವಾಸಿಗಳ(ಮಾಹಿತಿ ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ಇರುವ ಸ್ಥಳೀಯ ಯುವಕರು) ಮೂಲಕ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಕೈಗೊಳ್ಳಲಾಗುತ್ತಿದೆ. ಈ ಕಾರ್ಯದಲ್ಲಿ ಕಂದಾಯ, ಕೃಷಿ, ತೋಟಗಾರಿಕೆ, ರೇಷ್ಮೆ ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಗಳ ಅಧಿಕಾರಿಗಳು ತಮಗೆ ಹಂಚಿಕೆಯಾದ ಗ್ರಾಮಗಳ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.<br><br>ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯು ಇಳುವರಿ ಹಾಗೂ ಕ್ಷೇತ್ರ ಆಧಾರಿತ ಯೋಜನೆಯಾಗಿದ್ದು, ರೈತರ ನೋಂದಣಿಯಿಂದ ಪ್ರಾರಂಭವಾಗಿ ಬೆಳೆ ವಿಮೆ ಪರಿಹಾರ ರೈತರ ಖಾತೆಗೆ ಜಮೆಯಾಗುವವರೆಗೆ ಸಂಪೂರ್ಣ ಪ್ರಕ್ರಿಯೆಯು "ಸಂರಕ್ಷಣೆ" ಪೋರ್ಟಲ್ ಮೂಲಕವೇ ನಡೆಯುತ್ತದೆ.<br><br>ಸಂರಕ್ಷಣೆ ತಂತ್ರಾಂಶದಲ್ಲಿನ ನೋಂದಣಿ ದತ್ತಾಂಶದೊಂದಿಗೆ ಬೆಳೆ ಸಮೀಕ್ಷೆ ದತ್ತಾಂಶವನ್ನು ಸಂಯೋಜಿಸಿ, ಮಾರ್ಗಸೂಚಿಯನ್ವಯ ಕೇಂದ್ರ ಸರ್ಕಾರದಿಂದ ಅನುಮೋದಿಸಿದ ವಿನಾಯಿತಿಗಳನ್ನು ಅಳವಡಿಸಿಕೊಂಡು ಬೆಳೆ ವಿಮೆಗೆ ನೋಂದಣಿಯಾದ ಪ್ರಸ್ತಾವನೆಗಳಲ್ಲಿನ ಬೆಳೆಗೂ ಬೆಳೆ ಸಮೀಕ್ಷೆ ತಂತ್ರಾಂಶದಲ್ಲಿ ದಾಖಲಾದ ಬೆಳೆಗೂ ತಾಳೆ ಮಾಡಿ, ತಾಳೆಯಾಗುವ ಪ್ರಸ್ತಾವನೆಗಳಿಗೆ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಸಂರಕ್ಷಣೆ ತಂತ್ರಾಂಶದಲ್ಲಿ ದಾಖಲು ಮಾಡುವ ವಾಸ್ತವಿಕ ಇಳುವರಿಯ ಆಧಾರದ ಮೇಲೆ ಬೆಳೆ ವಿಮೆ ಪರಿಹಾರವನ್ನು ಲೆಕ್ಕ ಹಾಕಲಾಗುತ್ತದೆ.<br><br>ಮಧ್ಯಂತರ ವಿಮಾ ಪರಿಹಾರ ಹಾಗೂ Prevented sowing ಅಡಿ ಬೆಳೆ ನಷ್ಟವನ್ನು ನಿರ್ಧರಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಜಂಟಿ ಸಮಿತಿಯು ಆರ್ಥಿಕ ಮತ್ತು ಸಾಂಖ್ಯಿಕ, ಕೃಷಿ, ತೋಟಗಾರಿಕೆ, |

| | | |
|---|---|---|
| | | ಕಂದಾಯ ಇಲಾಖೆ, ಹಾಗೂ ಅನುಷ್ಠಾನ ವಿಮಾ ಸಂಸ್ಥೆಯ ಅಧಿಕಾರಿಗಳು ರೈತರ ಸಹಕಾರದೊಂದಿಗೆ ಕೇಂದ್ರ ಸರ್ಕಾರದ ಪರಿಷ್ಕೃತ ಮಾರ್ಗಸೂಚಿಯನ್ವಯ ಬೆಳೆ ಹಾನಿ ಪ್ರಮಾಣವನ್ನು ಅಂದಾಜಿಸಲು ಜಂಟಿ ಸಮೀಕ್ಷೆಯನ್ನು ಕೈಗೊಂಡು, ಸಮೀಕ್ಷೆಯ ವರದಿಯ ಅನುಗುಣವಾಗಿ ಸಂರಕ್ಷಣೆ ತಂತ್ರಾಂಶದ ಮುಖಾಂತರ ಬೆಳೆವಿಮೆ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆಯವರಿಂದ ಇತ್ಯರ್ಥ ಪಡಿಸಲಾಗುತ್ತಿದೆ.<br><br>ಬೆಳೆ ಕಟಾವು ಪ್ರಯೋಗ(CCE)ವನ್ನು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ವತಿಯಿಂದ ಕೈಗೊಳ್ಳಲಾಗುತ್ತದೆ. |
| ಆ) | ಸಮೀಕ್ಷೆ ಮಾಡುವ ಸಿಬ್ಬಂದಿಗಳಿಗೆ ಅಗತ್ಯ ಕೌಶಲ್ಯಾಭಿವೃದ್ಧಿ ತರಬೇತಿ, ಪರಿಕರ, ಪ್ರಯಾಣ ಭತ್ಯೆ ಹಾಗೂ ಇತರ ಪೂರಕ ಸವಲತ್ತುಗಳನ್ನು ನೀಡಲಾಗುತ್ತಿದೆಯೇ; ಇವೆಲ್ಲವುಗಳ ಅನುಪಸ್ಥಿತಿಯಲ್ಲಿ ಕೃಷಿ ಮಾಹಿತಿ ದಾಖಲೀಕರಣ ಕ್ರಮಬದ್ಧವಾಗಿ ಸಾಧ್ಯವೇ; | ಬೆಳೆ ಸಮೀಕ್ಷೆ ಮಾಡುವ ಸಮೀಕ್ಷೆದಾರ(ಖಾಸಗಿ ನಿವಾಸಿಗಳು)ರಿಗೆ ತಾಲ್ಲೂಕು ಆಡಳಿತದ ನೇತೃತ್ವದಲ್ಲಿ ಪ್ರತಿ ಹಂಗಾಮಿನ ಪೂರ್ವದಲ್ಲಿ ಬೆಳೆ ಸಮೀಕ್ಷೆ ಮೊಬೈಲ್ ಆಪ್ ನಲ್ಲಿ ಬೆಳೆ ವಿವರ ದಾಖಲಿಸುವ ಕುರಿತು ತರಬೇತಿಯನ್ನು ನೀಡಲಾಗುತ್ತಿದೆ.<br><br>ಬೆಳೆ ಸಮೀಕ್ಷೆ ಕಾರ್ಯವು ಹಂಗಾಮು ಆಧರಿತವಾಗಿದ್ದು, ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಸಂದರ್ಭಾನುಸಾರ ತಾತ್ಕಾಲಿಕವಾಗಿ ಸ್ಥಳೀಯ ಯುವಕರನ್ನು ಸಮೀಕ್ಷೆ ಕಾರ್ಯಕ್ಕೆ ಬಳಸಿಕೊಳ್ಳಲಾಗುತ್ತಿದ್ದು, ಸಮೀಕ್ಷೆ ಮಾಡುವ ಸಮೀಕ್ಷೆದಾರ(ಖಾಸಗಿ ನಿವಾಸಿಗಳು)ರಿಗೆ ಅನುಮೋದಿತ ತಾಕುಗಳಿಗೆ ಗೌರವಧನ ಪಾವತಿಸಲಾಗುತ್ತಿದೆ.<br><br>ಸಮೀಕ್ಷೆದಾರರು ಖುದ್ದಾಗಿ ಆಯಾ ರೈತರ ತಾಕಿಗೆ ಭೇಟಿ ನೀಡಿ ಮೊಬೈಲ್ ಆಪ್ ನಲ್ಲಿ ಬೆಳೆ ವಿವರಗಳನ್ನು ದಾಖಲಿಸುತ್ತಿರುವುದರಿಂದ ಬೆಳೆ ಸಮೀಕ್ಷೆ ಪ್ರಕ್ರಿಯೆ ಕ್ರಮಬದ್ಧವಾಗಿರುತ್ತದೆ.<br><br>ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳುವ ಸಿಬ್ಬಂದಿಗಳಿಗೆ ಅಗತ್ಯ ಕೌಶಲ್ಯಾಭಿವೃದ್ಧಿ ತರಬೇತಿ, ಪರಿಕರ, ಪ್ರಯಾಣ ಭತ್ಯೆ ಹಾಗೂ ಇತರ ಪೂರಕ ಸವಲತ್ತುಗಳನ್ನು ಒದಗಿಸುವ ಕುರಿತು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ವತಿಯಿಂದ ಕ್ರಮವಹಿಸಲಾಗುತ್ತಿದೆ. |
| ಇ) | ಬೆಳೆ ವಿಮೆ ಲೆಕ್ಕಾಚಾರ ಮಾಡಲು ಆ ಭಾಗದ ಮಳೆಯ ಪ್ರಮಾಣ, ನೆರೆ ಮತ್ತು ಬರಗಾಲದ ಸಂಭಾವ್ಯತೆ, ಬೆಳೆ ಪದ್ಧತಿ ಹಾಗೂ ಇತರ ಸಂಬಂಧಿತ ಅಂಶಗಳ ಸಮನ್ವಯತೆಯನ್ನು ಯಾವ ರೀತಿಯಲ್ಲಿ ಮಾಡಲಾಗುತ್ತದೆ; ಈ ಎಲ್ಲಾ ಅಂಕಿ ಅಂಶಗಳನ್ನು ತಾಳೆ ಹಾಕಲಾಗುತ್ತಿದೆಯೇ; | ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಪ್ರಕೃತಿ ವಿಕೋಪವಾದಲ್ಲಿ ಪರಿಹಾರವನ್ನು ಒದಗಿಸಲು ಕೇಂದ್ರ ಸರ್ಕಾರದ Operational Guidelines Kharif-2023ರ PMFBY ಮಾರ್ಗಸೂಚಿಯನ್ವಯ ಅಂಶಗಳು ಈ ಕೆಳಕಂಡಂತಿವೆ:<br><br>➢ ಮಳೆ ಅಭಾವ ಅಥವಾ ಇತರೆ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದ ಅಧಿಸೂಚಿತ ಘಟಕದಲ್ಲಿ ಶೇ.75 ಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಬಿತ್ತನೆ ವಿಫಲಗೊಂಡಲ್ಲಿ, ವಿಮಾ |

ಮೊತ್ತದ ಗರಿಷ್ಠ ಶೇ.25 ರಷ್ಟು ಪರಿಹಾರವನ್ನು ವಿಮಾ ಸಂಸ್ಥೆಯು ವಿಮೆ ಮಾಡಿಸಿದ ರೈತರಿಗೆ ಇತ್ಯರ್ಥ ಪಡಿಸಿ ಮುಂದಿನ ಅವಧಿಗೆ ವಿಮೆಯನ್ನು ರದ್ದು ಪಡಿಸಲು Prevented sowing/planting risk ಅಡಿ ಅವಕಾಶವಿರುತ್ತದೆ.

- ಬಿತ್ತನೆ ನಂತರ ಕಟಾವಿಗೆ ಮೊದಲು ಸಂಭವಿಸುವ ಹವಾಮಾನ ವೈಪರೀತ್ಯಗಳಾದ ಹೆಚ್ಚಿನ ಮಳೆ, ನೆರೆ/ಪ್ರವಾಹಗಳಿಂದ ಬೆಳೆ ಮುಳುಗಡೆ, ದೀರ್ಘಕಾಲದ ತೇವಾಂಶ ಕೊರತೆ (prolonged dry spell), ತೀವ್ರ ಬರಗಾಲ ಮುಂತಾದವುಗಳಿಂದ ಯಾವುದೇ ಅಧಿಸೂಚಿತ ವಿಮಾ ಘಟಕದಲ್ಲಿ ಬಿತ್ತನೆಯಾದ ನಂತರ ಕಟಾವಿಗೆ ಮೊದಲು ಮಧ್ಯಂತರ ಬೆಳೆ ವಿಮಾ ಪರಿಹಾರ (On account payment due to midseason adversity) ನೀಡಲು ಅವಕಾಶವಿರುತ್ತದೆ.
- ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳಾದ (Localized calamity) ಆಲೀಕಲ್ಲು ಮಳೆ, ಭೂ ಕುಸಿತ, ಬೆಳೆ ಮುಳುಗಡೆ(ಇನಂಡೇಷನ್), ಮೇಘಸ್ಫೋಟ(Cloud burst) ಮತ್ತು ಗುಡುಗು-ಮಿಂಚುಗಳಿಂದಾಗಿ ಉಂಟಾಗುವ ಬೆಂಕಿ ಅವಘಡ(Natural fire due to lightning) ಗಳಿಂದ ಉಂಟಾಗುವ ನಷ್ಟದ ನಿರ್ಧರಣೆಯನ್ನು ವೈಯುಕ್ತಿಕವಾಗಿ ನಿರ್ಧರಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಯೋಜನೆಯಡಿ ಅವಕಾಶವಿರುತ್ತದೆ.
- ಬೆಳೆ ಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲೇ ಒಣಗಲು ಬಿಟ್ಟಂತಹ ಸಂದರ್ಭದಲ್ಲಿ ಕಟಾವು ಮಾಡಿದ ಎರಡು ವಾರಗಳೊಳಗೆ (ಹದಿನಾಲ್ಕು ದಿನಗಳು) ಚಂಡಮಾರುತ, ಚಂಡಮಾರುತ ಸಹಿತ ಮಳೆ ಮತ್ತು ಅಕಾಲಿಕ ಮಳೆಯಿಂದಾಗಿ ಬೆಳೆ ನಾಶವಾದರೆ ವೈಯುಕ್ತಿಕವಾಗಿ ನಷ್ಟ ನಿರ್ಧಾರ ಮಾಡಿ ಕೊಯ್ಲೋತ್ತರ ಬೆಳೆ ನಷ್ಟ(Post Harvest Losses) ಅಡಿ ಬೆಳೆ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಯೋಜನೆಯಡಿ ಅವಕಾಶವಿರುತ್ತದೆ.

ಮೇಲೆ ತಿಳಿಸಿರುವಂತೆ, ಅತಿವೃಷ್ಟಿ ಅಥವಾ ಅನಾವೃಷ್ಟಿ ಸಂದರ್ಭಗಳಲ್ಲಿ ಬೆಳೆಹಾನಿಯಾದಲ್ಲಿ KRS-PMFBY ಯೋಜನೆಯಡಿ ಬೆಳೆವಿಮೆಗೆ ನೋಂದಾಯಿಸಿದ ರೈತರು ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪ ಮತ್ತು ಕೊಯ್ಲೋತ್ತರ ಬೆಳೆ ನಷ್ಟದಡಿ ಘಟನೆ ಸಂಭವಿಸಿದ 72 ಗಂಟೆಗಳೊಳಗೆ ನೇರವಾಗಿ ಸಂಬಂಧಪಟ್ಟ ಅನುಷ್ಠಾನಗೊಳಿಸುವ ವಿಮಾ ಸಂಸ್ಥೆಗಳ ಕಚೇರಿಗಳಿಗೆ ಅಥವಾ ಹಣಕಾಸು ಸಂಸ್ಥೆ ಅಥವಾ ಕೃಷಿ/ತೋಟಗಾರಿಕೆ ಇಲಾಖೆ ಮೂಲಕ ನಷ್ಟದ ಬಗ್ಗೆ ದೂರು (intimation) ಸಲ್ಲಿಸಿದ್ದಲ್ಲಿ, ಕೇಂದ್ರ ಸರ್ಕಾರದ

| | | |
|---|---|---|
| | | ಮಾರ್ಗಸೂಚಿಯನ್ವಯ ಬೆಳೆ ಹಾನಿ ಪ್ರಮಾಣವನ್ನು ಅಂದಾಜಿಸಲು ಜಂಟಿ ಸಮೀಕ್ಷೆಯನ್ನು ಕೈಗೊಂಡು, ಸಮೀಕ್ಷೆಯ ವರದಿಯ ಅನುಗುಣವಾಗಿ ಸಂರಕ್ಷಣೆ ತಂತ್ರಾಂಶದ ಮುಖಾಂತರ ಬೆಳೆವಿಮೆ ಪರಿಹಾರ ಮೊತ್ತವನ್ನು ವಿಮಾಸಂಸ್ಥೆಯವರಿಂದ ಇತ್ಯರ್ಥ ಪಡಿಸಲಾಗುತ್ತದೆ. |
| ಈ) | ಕೃಷಿ ಜಾಗದಲ್ಲಿ ಇರುವ ತೋಟಗಾರಿಕಾ ಬೆಳೆ, ಕೃಷಿ ಬೆಳೆ ಮತ್ತು ಅಲ್ಪ ಕಾಲೀನ ತರಕಾರಿ ಹಾಗೂ ಇತರ ಕೃಷಿ ಸಂಬಂಧಿತ ಚಟುವಟಿಕೆಗಳನ್ನು ಯಾವ ರೀತಿಯಲ್ಲಿ ದಾಖಲಿಸಲಾಗುತ್ತಿದೆ; ಈ ದಾಖಲೀಕರಣದ ಅನುಪಸ್ಥಿತಿಯಲ್ಲಿ ಕೃಷಿಗೆ ಪೂರಕ ಅನುದಾನ, ಕೃಷಿ ಸಹಾಯಧನ, ಪರಿಕರ, ಇತ್ಯಾದಿಗಳನ್ನು ನೀಡಲು ಸಮಸ್ಯೆ ಆಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ರಾಜ್ಯದ ಎಲ್ಲಾ ರೈತರ ತಾಕುಗಳ ಬೆಳೆ ಮಾಹಿತಿ ದಾಖಲಿಸುವ ಸಲುವಾಗಿ ಆದ್ಯತೆ ಮೇರೆಗೆ ಪ್ರಥಮವಾಗಿ ಸ್ವತಃ ರೈತರೇ "ಬೆಳೆ ಸಮೀಕ್ಷೆ ರೈತರ ಆಪ್" ನಲ್ಲಿ ಬೆಳೆ ಮಾಹಿತಿ ನಮೂದಿಸಲು ಅವಕಾಶ ಕಲ್ಪಿಸಲಾಗಿದೆ. ಸಕಾಲದಲ್ಲಿ ರೈತರು ಬೆಳೆಸಮೀಕ್ಷೆ ಮಾಡದೆ ಇದ್ದಲ್ಲಿ, ರೈತರಿಗೆ ವಿವಿಧ ಪ್ರಯೋಜನಗಳನ್ನು ನೀಡಲು ಅನುವಾಗುವಂತೆ ಸಮೀಕ್ಷೆದಾರರು ಖುದ್ದಾಗಿ ಆಯಾ ರೈತರ ತಾಕಿಗೆ ಭೇಟಿ ನೀಡಿ ರೈತರ ತಾಕುಗಳಲ್ಲಿರುವ ಕೃಷಿ, ತೋಟಗಾರಿಕೆ, ರೇಷ್ಮೆ ಸೇರಿದಂತೆ ಎಲ್ಲಾ ಅಲ್ಪಾವಧಿ ಹಾಗೂ ದೀರ್ಘಾವಧಿ ಬೆಳೆಗಳ ವಿವರಗಳನ್ನು ಬೆಳೆ ಸಮೀಕ್ಷೆ ಮೊಬೈಲ್ ಆಪ್ ಹಾಗೂ ಬಹುವಾರ್ಷಿಕ ದೃಡೀಕರಣ ಆಪ್ ಮೂಲಕ ದಾಖಲಿಸಲಾಗುತ್ತಿದೆ. |
| ಉ) | ಬೆಳೆ ನಷ್ಟ ಪರಿಹಾರದ ಮೊತ್ತವನ್ನು ಇತ್ತೀಚಿಗೆ ಯಾವಾಗ ನಿಗಧಿಪಡಿಸಲಾಗಿತ್ತು; ಅನುಸರಿಸಿದ ಮಾನದಂಡಗಳೇನು; ಈಗಿರುವ ನಷ್ಟ ಪರಿಹಾರ ಮೊತ್ತವು ಅತೀ ಕಡಿಮೆಯಾಗಿದ್ದು ಅದನ್ನು ಯಾವಾಗ ಪರಿಷ್ಕರಿಸಲಾಗುವುದು? | ವಿಪತ್ತು ನಿರ್ವಹಣಾ ಕಾಯ್ದೆ, 2005ರ ವಿಧಾನಗಳ ಅನುಸಾರವಾಗಿ, ಭಾರತ ಸರ್ಕಾರವು ರಾಜ್ಯ ವಿಪತ್ತು ಪ್ರತಿಕ್ರಿಯಾ ನಿಧಿ (State Disaster Response Fund – SDRF) ಅನ್ನು ಸ್ಥಾಪಿಸಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ 75:25 ಅನುಪಾತದಲ್ಲಿ ಅನುದಾನವನ್ನು ಹಂಚಿಕೊಳ್ಳಲಾಗುತ್ತದೆ. ರಾಜ್ಯಗಳಿಗೆ ನಿಧಿಯ ಹಂಚಿಕೆ ಹಣಕಾಸು ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಮಾಡಲಾಗುತ್ತದೆ. SDRF ಹಾಗೂ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯಾ ನಿಧಿ (National Disaster Response Fund – NDRF) ಅಡಿಯಲ್ಲಿ ನೀಡಲಾಗುವ ಸಹಾಯದ ಅಂಶಗಳು ಮತ್ತು ಮಾನದಂಡಗಳನ್ನು ಭಾರತ ಸರ್ಕಾರದ ಗೃಹ ಸಚಿವಾಲಯವು ನಿರ್ಧರಿಸುತ್ತಿದ್ದು, ಅವುಗಳನ್ನು ಹಣಕಾಸು ಆಯೋಗದ ಶಿಫಾರಸ್ಸುಗಳಿಗೆ ಅನುಗುಣವಾಗಿ ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತದೆ.<br><br>ಭಾರತ ಸರ್ಕಾರದ ಗೃಹ ಸಚಿವಾಲಯವು 11.07.2023ರಂದು ಹೊರಡಿಸಿದ SDRF ಮತ್ತು NDRF ಅಡಿಯಲ್ಲಿ ನೀಡಲಾಗುವ ಸಹಾಯದ ಪರಿಷ್ಕೃತ ಅಂಶಗಳು ಮತ್ತು ಮಾನದಂಡಗಳು ಪ್ರಸ್ತುತ ಜಾರಿಯಲ್ಲಿವೆ. ಪರಿಷ್ಕೃತ ಸಹಾಯದ ಅಂಶಗಳು ಮತ್ತು ಮಾನದಂಡಗಳ ಅಂಶ ಸಂಖ್ಯೆ-5 ರಂತೆ, ಅಧಿಸೂಚಿತ ವಿಪತ್ತುಗಳಿಂದಾಗಿ ಕೃಷಿ ಬೆಳೆಗಳು ಹಾಗೂ ತೋಟಗಾರಿಕಾ ಬೆಳೆಗಳಿಗೆ ಶೇ.33 ಅಥವಾ ಅದಕ್ಕಿಂತ ಹೆಚ್ಚು ಬೆಳೆ ನಷ್ಟ ಸಂಭವಿಸಿದಲ್ಲಿ, ಬಾಧಿತ ರೈತರಿಗೆ (ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ) ಇನ್‌ಪುಟ್ |

| | | |
|---|---|---|
| | | ಸಹಾಯಧನದ ರೂಪದಲ್ಲಿ ಪರಿಹಾರವನ್ನು ಕೆಳಕಂಡಂತೆ ನೀಡಲಾಗುತ್ತದೆ:<br><br>(i) ಮಳೆಯಾಧಾರಿತ ಪ್ರದೇಶಗಳಲ್ಲಿ ಪ್ರತಿ ಹೆಕ್ಟೇರ್‌ಗೆ ರೂ.8,500/- (ಪ್ರತಿ ರೈತರಿಗೆ ಕನಿಷ್ಠ ರೂ.1,000/- ಸಹಾಯಧನ ನೀಡಲಾಗುತ್ತದೆ ಮತ್ತು ಇದು ಬಿತ್ತಿದ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುತ್ತದೆ).<br><br>(ii) ನೀರಾವರಿ ಪ್ರದೇಶಗಳಲ್ಲಿ ಪ್ರತಿ ಹೆಕ್ಟೇರ್‌ಗೆ ರೂ.17,000/- (ಪ್ರತಿ ರೈತರಿಗೆ ಕನಿಷ್ಠ ರೂ.2,000/- ಸಹಾಯಧನ ನೀಡಲಾಗುತ್ತದೆ ಮತ್ತು ಇದು ಬಿತ್ತಿದ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುತ್ತದೆ).<br><br>(iii) ತೆಂಗು ಹಾಗೂ ಅಡಿಕೆ ಸೇರಿದಂತೆ ಎಲ್ಲಾ ವಿಧದ ಬಹುವಾರ್ಷಿಕ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ.22,500/- (ಬಿತ್ತಿದ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುತ್ತದೆ).<br><br>ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ SDRF / NDRF ಅಡಿಯಲ್ಲಿ ನೀಡಲಾಗುವ ಆರ್ಥಿಕ ಸಹಾಯವು ನಷ್ಟಪೂರಣಕ್ಕಾಗಿ ಅಲ್ಲದೆ, ಪರಿಹಾರದ ರೂಪದಲ್ಲಿಯೇ ನೀಡಲಾಗುತ್ತದೆ.<br><br>ಪ್ರಕೃತಿ ವಿಕೋಪಗಳು ಮತ್ತು ಅಸಹಜ ಹವಾಮಾನ ಪರಿಸ್ಥಿತಿಗಳಿಂದ ಉಂಟಾಗುವ ಬೆಳೆ ನಷ್ಟಕ್ಕೆ ಪರಿಹಾರ ಒದಗಿಸಲು ಹಾಗೂ ರೈತರ ಆದಾಯವನ್ನು ಸ್ಥಿರಗೊಳಿಸುವ ಉದ್ದೇಶದಿಂದ, ಭಾರತ ಸರ್ಕಾರವು Kharif-2016 ರಿಂದ ಉತ್ಪಾದನಾ ಆಧಾರಿತ ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನೆ (PMFBY) ಮತ್ತು ಹವಾಮಾನ ಸೂಚ್ಯಂಕ ಆಧಾರಿತ ಪುನರ್‌ರಚಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (WBCIS)ಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಗಳ ಅಡಿಯಲ್ಲಿ ವಿಮೆ ಪಡೆದ ರೈತರಿಗೆ ಮಾತ್ರ ಬಿತ್ತನೆಗೂ ಮುನ್ನದಿಂದ ಕೊಯ್ಲಿನ ನಂತರದ ಹಂತದವರೆಗೆ ಉಂಟಾಗುವ ನಷ್ಟಗಳಿಗೆ ಸಮಗ್ರ ವಿಮಾ ರಕ್ಷಣೆ ನೀಡಲಾಗುತ್ತಿದೆ. PMFBY ಮತ್ತು WBCIS ಯೋಜನೆಗಳ ಅಡಿಯಲ್ಲಿ ಬೆಳೆ ಹಾನಿಗೆ ಪರಿಹಾರವನ್ನು ಒದಗಿಸಲಾಗುತ್ತಿದೆ. |

*ಕೃ ಇ 238 ಎಎಂಎಸ್ 2025*

**(ಎನ್.ಚಲುವರಾಯಸ್ವಾಮಿ)**

ಕೃಷಿ ಸಚಿವರು